**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 22-06-2023.**

**ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :**

**1)** ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿ ಸಾಕ್ಷಿ ನುಡಿಯುತ್ತಿದ್ದೇನೆ.

**2)** ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

**3)** ಸಿ.ಸಿ. ನಂ.11934/2004ರ ಆದೇಶದ ಪುಟಗಳ ದೃಢೀಕೃತ ಪ್ರತಿಯನ್ನು ನಿ.ಪಿ.40 ಎಂದು, ಸದರಿ ಪ್ರಕರಣದ ತೀರ್ಪಿನ ದೃಢೀಕೃತ ಪ್ರತಿಯನ್ನು ನಿ.ಪಿ.41 ಎಂದು, ಕ್ರಿಮಿನಲ್ ರಿವಿಷನ್ ಪಿಟಿಷನ್ ನಂ.648/2011 ಜೊತೆಗೆ 651/2011ರ ತೀರ್ಪಿನ ದೃಢೀಕೃತ ಪ್ರತಿಯನ್ನು ನಿ.ಪಿ.42 ಎಂದು, ಅಸಲು ದಾವಾ ನಂ.7861/2007ರ ತೀರ್ಪಿನ ಮತ್ತು ಡಿಕ್ರಿಯ ದೃಢೀಕೃತ ಪ್ರತಿಗಳನ್ನು ನಿ.ಪಿ.43 ಮತ್ತು ನಿ.ಪಿ.44 ಎಂದು, ಅಸಲು ದಾವಾ ನಂ.309/1998ರ ಆದೇಶ ಪುಟಗಳು, ವಾದ ಪತ್ರ, ಲಿಖಿತ ಹೇಳಿಕೆ, ವಿವಾದಾಂಶಗಳು, ಮಧ್ಯಂತರ ಅರ್ಜಿ ನಂ.1, ಅದಕ್ಕೆ ಸಲ್ಲಿಸಿದ ತಕರಾರು, ಇವುಗಳ ದೃಢೀಕೃತ ಪ್ರತಿಗಳನ್ನು ನಿ.ಪಿ.45 ರಿಂದ ನಿ.ಪಿ.50 ಎಂದು, ಸದರಿ ದಾವೆಯಲ್ಲಿ ಸಲ್ಲಿಸಿದ ಖಾತಾ Extract ಅನ್ನು ನಿ.ಪಿ.51 ಎಂದು ಮತ್ತು ಅಸಲು ದಾವಾ ನಂ.1610/2007ರ ಆದೇಶ ಪುಟಗಳು ಹಾಗೂ ಮಧ್ಯಂತರ ಅರ್ಜಿಯ ದೃಢೀಕೃತ ಪ್ರತಿಗಳನ್ನು ನಿ.ಪಿ.52 ಮತ್ತು ನಿ.ಪಿ.53 ಎಂದು ಗುರುತಿಸಲಾಯಿತು.

**4)** ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**